ದಿನಾಂಕಃ 30-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಸಿ.ಎಂ **1** ಮತ್ತು **8** ನೇ ಪ್ರತಿವಾದಿಗಳ ಪರ ವಕೀಲರಿಂದಃ

7 ರಿಂದ 9 ನೇ ಪ್ರತಿವಾದಿಗಳನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಸೇರಿಸಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ 9 ನೇ ಪ್ರತಿವಾದಿ ಯಾರೆಂಬುದು ನನಗೆ ಗೊತ್ತಿಲ್ಲ, ಅದರೆ ಆಸ್ತಿಯಲ್ಲಿ ಭಾಗ ನೀಡದ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. 7 ಮತ್ತು 8 ನೇ ಪ್ರತಿವಾದಿಗಳು ನನ್ನ ಕುಟುಂಬದವರು ಅಲ್ಲ ಎಂದರೆ ಸರಿ. 7 ಮತ್ತು 8 ನೇ ಪ್ರತಿವಾದಿಗಳನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಸೇರಿಸಿದ್ದೇನೆ ಎಂಬುದನ್ನು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಸರ್ವೆ ನಂ.66 ರ 25 ಗುಂಟೆ, ಸರ್ವೆ ನಂ. 475 ರ 7 ಗುಂಟೆ, ಸರ್ವೆ ನಂ. 5/4 ರ 1 ಎಕರೆ 1 ಗುಂಟೆ, ಸರ್ವೆ ನಂ. 79 ರ 1 ಎಕರೆ 24 ಗುಂಟೆ, ಸರ್ವೆ ನಂ. 39 ರ 30 ಗುಂಟೆ, ಸರ್ವೆ ನಂ. 5/4 ರಲ್ಲಿ 1 ಎಕರೆ 8 ಗುಂಟೆ, ಸರ್ವೆ ನಂ. 5/3 ರ 27 ಗುಂಟೆಗೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ಸದರಿ ಸ್ವತ್ತುಗಳಿಗೆ ಸಂಬಂಧಪಟ್ಟ ಪಹಣಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಒಂದು ಮನೆ ಮತ್ತು ವಠಾರ ಇರುತ್ತದೆ. ಸದರಿ ಮನೆ ಮತ್ತು ವಠಾರವನ್ನು ಹೊರತುಪಡಿಸಿ ನನ್ನ ಸಹೋದರರ ಹೆಸರಿನಲ್ಲಿ ಬೇರೆ ಯಾವುದೇ ಒಟ್ಟು ಕುಟುಂಬದ ಖಾಲಿ ನಿವೇಶನ ಅಥವಾ ಮನೆ ಇರುವುದಿಲ್ಲ.

ನನ್ನ ತಂದೆಯವರು ಬದುಕಿದ್ದಾಗ ಎಷ್ಟು ಸ್ವತ್ತುಗಳನ್ನು ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ಒಟ್ಟು ಕುಟುಂಬದಲ್ಲಿದ್ದಾಗ ನನ್ನ ತಂದೆಯವರು ಸ್ವತ್ತುಗಳನ್ನು ಖರೀದಿಸಿದರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಸ್ವತ್ತುಗಳನ್ನು ಖರೀದಿಸಿದ ಸಮಯದಲ್ಲಿ ನನಗೆ ಸುಮಾರು 10-12 ವರ್ಷ ವಯಸ್ಸಾಗಿತ್ತು. ನನ್ನ ತಂದೆಯವರು ಸ್ವತ್ತುಗಳನ್ನು ಯಾರಿಂದ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಗ ದಾವಾ ಐಟಂ ನಂ.5 ರ ಸ್ವತ್ತು ಹೇಗೆ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ

ಹೇಳಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ.5 ರಲ್ಲಿ 2 1/2 ಗುಂಟೆಯನ್ನು 8 ನೇ ಪ್ರತಿವಾದಿಯು ಖರೀದಿಸಿದ ನಂತರ ಅದರ ದಾಖಲೆಗಳೆಲ್ಲವು 8 ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.5 ರ ಆಸ್ತಿಯು 8 ನೇ ಪ್ರತಿವಾದಿಗೆ ಯಾರ ಕಡೆಯಿಂದ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಅದು ನನ್ನ ತಂದೆಯ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.5 ರ ದಾಖಲೆಗಳು 8 ನೇ ಪ್ರತಿವಾದಿಯ ಹೆಸರಿಗೆ ಬದಲಾಗಿ ಸುಮಾರು 10 ವರ್ಷಗಳಾಗಿವೆ.

ನಾನು 7 ನೇ ಪ್ರತಿವಾದಿಗೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನಿಡಿ-1 ರ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟೆನು ಎಂದರೆ ಸರಿ. ನಿಡಿ-1 ರ ಮೂಲಕ 7 ನೇ ಪ್ರತಿವಾದಿಯಿಂದ ರೂ.1,00,000/-ವನ್ನು ನಾನು ಪಡೆದುಕೊಂಡೆನು. ನಿಡಿ-1 ನ್ನು ಯಾವ ಕಾರಣಕ್ಕಾಗಿ ಬರೆದುಕೊಟ್ಟಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ ದಾವೆಯನ್ನು ಹೂಡಿದ ನಂತರ ನಿಡಿ-1 ನ್ನು ಬರೆದುಕೊಟ್ಟೆನು ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇರುವುದಿಲ್ಲವೆಂದು ಒಪ್ಪಿ ನಿಡಿ-1 ರ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟೆನು ಎಂದರೆ ಸರಿ. ನಿಡಿ-1 ಕ್ಕೆ ನನ್ನ ಕುಟುಂಬದ ಇತರೆ ಸದಸ್ಯರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ.5 ರಲ್ಲಿರುವ ನನ್ನ ಭಾಗವನ್ನು 7 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು